

ಸರಿಯೇ, ಅರ್ಧ ದಿನ ಒಂದು ನರಪಿಳ್ಳೆಯೂ ರಸ್ತೆಯಲ್ಲಿ ಕಂಡಿರಲಿಲ್ಲ.

ಕಮ್ಮಟದ ಉದ್ಘಾಟನೆಗೆ ಬರಬೇಕಿದ್ದ ಮಾನ್ಯ ಶಿವರಾಮ ಕಾರಂತರು 'ಇನ್ನೊಂದು ಗ್ರಹಣ ನೋಡುವಷ್ಟು ಆಯಸ್ಸು ನನಗುಳಿದಿಲ್ಲ. ಇಂಥ ಸುವರ್ಣಾವಕಾಶವನ್ನು ಬಿಟ್ಟು ಬೆಂಗಳೂರಿಗೆ ಬಂದು ಭಾಷಣ ಮಾಡಲೇ?' ಎಂದು ಝಾಡಿಸಿ ಹುಬ್ಬಳ್ಳಿಗೆ ಸವಾರಿ ಮಾಡಿದ್ದರು. ಅವರ ಭಾಷಣ ಕೇಳಲಿಕ್ಕೆ ಹಿಂದಿನ ದಿನ ಅದೇ ಹುಬ್ಬಳ್ಳಿಯ ಮೂಲಕ ಪ್ರವಾಸ ಮಾಡಿ ಬೆಂಗಳೂರಿಗೆ ಬಂದು ನಾನು ಮುಠ್ಠಾಳನಾಗಿದ್ದೆ! ಪ್ರಾಯಶ್ಚಿತ್ತವೆಂದು ನನ್ನ ಇಬ್ಬರು ಹದಿಹರೆಯದ ಕಸಿನ್ನುಗಳನ್ನು ಮನೆಯಿಂದ ಹೊರಗೆ ಹೊರಡಿಸಿ ಒಂದು ದಿಬ್ಬದ ಮೇಲೆ ಕೂತು ಮೂವರೂ ಉಂಡಿ ಅವಲಕ್ಕಿಗಳನ್ನು ಮುಕ್ಕುತ್ತ ಅರ್ಧಮರ್ಧ ಗ್ರಹಣದ ವೀಕ್ಷಣೆ ಮಾಡಿದ್ದೆವು.

ಅಂತರ್ಜಾಲದ ಒಂದು ಅತಿ ಗೋಪ್ಯ ರಹಸ್ಯವನ್ನು ಇಲ್ಲಿ ಬಯಲು ಮಾಡಬೇಕು. ಅರೆಬೆಂದ ರಾಜಕೀಯ, ಅಪಕ್ವ ನೀತಿಬೋಧೆ, ಬಾಲಿವುಡ್ ಹಾದರದ ವದಂತಿಗಳಿಗೆ ಮಾತ್ರ ಅದು ಮೀಸಲಾಗಿಲ್ಲ. ಫೇಸ್‌ಬುಕ್, ಟ್ವಿಟರ್, ಸ್ನ್ಯಾಪ್‌ಚಾಟ್ ಇತ್ಯಾದಿ ಕಂದರಗಳನ್ನು ದಾಟಿಕೊಂಡು ಹೋಗಿ ಸರಿಯಾದ ಸ್ಥಾನಗಳಲ್ಲಿ ಹುಡುಕಿದರೆ ವಿಜ್ಞಾನವೂ ಸೇರಿದಂತೆ ಎಲ್ಲ ಶಾಸ್ತ್ರೀಯ ವಿಷಯಗಳ ತಿಳುವಳಿಕೆಯೂ ಅದರಲ್ಲಿ ಸಿಗುತ್ತದೆ. ಹಲವಾರು ಹವ್ಯಾಸಿ ಮತ್ತು ವೃತ್ತಿಪರ ಖಗೋಳಜ್ಞರು ಗ್ರಹಣ ವೀಕ್ಷಣೆಗೆ ಬೇಕಾದ ಎಲ್ಲ ಮಾಹಿತಿಗಳನ್ನೂ ಒದಗಿಸಿದ್ದರು. ಯಾವ ಜಾಗದಲ್ಲಿ ನಿಂತು ನೋಡಿದರೆ ಎಷ್ಟು ಸೆಕೆಂಡು ಸಂಪೂರ್ಣತೆಯ ದರ್ಶನ ಸಿಗುತ್ತದೆಂಬ ನಿಖರವಾದ ಲೆಕ್ಕಾಚಾರ. 'ನಾಸಾ'ದವರು ಸೂರ್ಯಬಿಂಬವನ್ನು ಸುರಕ್ಷಿತವಾಗಿ ನೋಡಲು ಎಂಥ ಗಾಜುಗಳು ಬೇಕು, ಅವುಗಳನ್ನು ಯಾರು ತಯಾರಿಸುತ್ತಾರೆ ಎಂದು ವಿವರವಾಗಿ ತಿಳಿಸಿದ್ದರು.

ನಾವು ಸೇಲಂ ನಗರದಿಂದ ಸ್ವಲ್ಪ ದೂರ ಜೆಫರ್ಸನ್ ಎಂಬ ಹಳ್ಳಿಯನ್ನು ಆಯ್ದುಕೊಂಡಿದ್ದೆವು. ಬೆಳಿಗ್ಗೆ ಎರಡು ತಾಸು ಮುಂಚಿತವಾಗಿ ಹೋದಾಗ ಆಗಲೇ ನಮ್ಮಂತೆ ಬೇರೆ ಬೇರೆ ಕಡೆಗಳಿಂದ ಬಂದ ಸುಮಾರು ಜನ ಚೌಕಿಯಲ್ಲಿ ನೆರೆದಿದ್ದರು. ಹೆಚ್ಚಿನವರು ಕುಟುಂಬ ಜೀವಿಗಳು, ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಬಂದಿದ್ದರು. ಊರವರು ತಮ್ಮ ಮನೆಗಳ ಮುಂದೆ ಗುಡಾರ ಹಾಸಿಕೊಂಡು ದಿಂಬುಗಳಿಗೆ ಒರಗಿ ಹಾಯಾಗಿ ಆಕಾಶ ಕಾಯುತ್ತಿದ್ದರು. ನಮ್ಮಂತೆ ಎಲ್ಲರೂ ಸೂರ್ಯನನ್ನು ನೇರ ನೋಡಲು ಅಗತ್ಯವಾದ ಕನ್ನಡಕಗಳೊಡನೆ ಸಜ್ಜಿತರಾದವರು. ಯಾರೂ ಈ ಮುಂಚೆ ಸಂಪೂರ್ಣ ಗ್ರಹಣ ನೋಡಿದಂತಿಲ್ಲ. ಇದ್ದ ಒಂದೇ ಫಳಾರದ ಅಂಗಡಿಯ ಹೆಂಗಸರು ಬೆಳಿಗ್ಗೆ ಆರರಿಂದ ಗಿರಾಕಿಗಳಿಗೆ ನಾಷ್ಟಾ ಸಪ್ಲೈ ಮಾಡಿ ಸುಸ್ತಾಗಿ ಕೆಲಸ ನಿಲ್ಲಿಸಿದ್ದರು. ಚಕ್ಕುಲಿ, ಚಿವಡಾ ಮತ್ತು ಮುಖ್ಯವಾಗಿ ಬಾಬುಸಿಂಗ ಠಾಕೂರನ ಒರಿಜಿನಲ್ ಧಾರವಾಡ ಪೇಡೆಗಳೊಂದಿಗೆ ಸಜ್ಜಾಗಿ ಬಂದಿದ್ದ ನಮಗೆ ಅದರ ಅಗತ್ಯವಿರಲಿಲ್ಲ. ಪಕ್ಕದಲ್ಲಿ ಒಂದು ಚರ್ಚು ಇತ್ತಾದರೂ ಅದರ ಬಾಗಿಲು ತೆರೆದಿರಲಿಲ್ಲ. ಪಾದರಿ ಸ್ವಾಮಿಗಳು ಇಗರ್ಜಿಗೆ ಬೀಗ ಜಡಿದು ಗೋಪುರದ ತುದಿಯಲ್ಲಿ ಕೂತು ಗ್ರಹಣದ ವೀಕ್ಷಣೆ ಮಾಡುತ್ತಿದ್ದರೆ?

ನೆರೆದ ಮಕ್ಕಳನ್ನು ನೋಡಿ ನನಗೆ ಒಂದು ಬಗೆಯ ಕುತೂಹಲ. ನಡುಹಗಲಿನಲ್ಲಿ ಇದ್ದಕಿದ್ದಂತೆ ಕತ್ತಲಾದಾಗ ಇವು ಏನು ಮಾಡುತ್ತವೆ? ಗಾಬರಿಯಾಗಿ ಅಳಲಿಕ್ಕೆ ಸುರು ಮಾಡಿದರೆ? ನನ್ನ ಪಕ್ಕದಲ್ಲಿದ್ದವ ಇಬ್ಬರು ಸಣ್ಣ ಹುಡುಗಿಯರು ಮತ್ತು ಮನೆಯ ಎರಡು ನಾಯಿಗಳೊಡನೆ ಬಂದಿದ್ದ. ಅವನು ಐದು ವರ್ಷದವನಿದ್ದಾಗ ಎಂಥದೋ ಒಂದು ಗ್ರಹಣ ನೋಡಿದ್ದನಂತೆ, ಈಗ ಏನೂ ನೆನಪಿಲ್ಲ. 'ಒಂದು ತಿಂಗಳಿಂದ ಅವರಿಗೆ ಗ್ರಹಣದ ಬಗ್ಗೆ ತಿಳಿಸಿ ಕೊಟ್ಟಿದ್ದೇವೆ. ಕತ್ತಲೆಗೆ ತಯಾರಾಗಿಯೇ ಬಂದಿದ್ದಾರೆ. ನಮ್ಮ ಮಕ್ಕಳಿರಲಿ, ಸಾವಿರಾರು ವರ್ಷಗಳ ಹಿಂದೆ ರಾಜರುಗಳಿದ್ದ ಕಾಲದಲ್ಲಿ ದೊಡ್ಡವರಿಗೆ ಯಾವ ಥರದ ಗಾಬರಿಯಾಗುತ್ತಿತ್ತು ಎಂದು ಕಲ್ಪಿಸಿಕೊಂಡು ನನಗೆ ಕೌತುಕವಾಗುತ್ತಿದೆ' ಎಂದ. ಆ ಕ್ಷಣದಲ್ಲೇನೋ ಅವನ ಹುಡುಗಿಯರಿಗೆ ಸೂರ್ಯನ ಕಡೆ ಲಕ್ಷ್ಯವಿರಲಿಲ್ಲ. ರಸ್ತೆಯ ಬದಿಯಲ್ಲಿದ್ದ ಕಪ್ಪೆಯನ್ನು ನೋಡಿದ ಸಂಭ್ರಮದಲ್ಲಿ ತಾವೂ ಕುಪ್ಪಳಿಸುತ್ತಿದ್ದರು.

ಸಮಯಕ್ಕೆ ಸರಿಯಾಗಿ ರಾಹುವಿನ ಆಗಮನವೂ ಆಯಿತು. ಅರ್ಧ